ನೀನು ನಿನ್ನ ಕೈ ಕಾಲುಗಳನ್ನು ಕಳೆದುಕೊಂಡು ಬಾ' ಎಂದು ನುಡಿದ. ತಮ್ಮನು ತನ್ನ ಕೈಕಾಲುಗಳನ್ನು ಕಳೆದುಕೊಂಡು ಚಿನ್ನ ಪಡೆಯಲು ಒಪ್ಪಲಿಲ್ಲ. ಬೇರೆ ಉಪಾಯ ಸೂಚಿಸುವಂತೆ ಬೇಡಿಕೊಂಡ.

ಅದಕ್ಕೆ ಮುನಿಯು 'ಇನ್ನು ಒಂದೇ ಒಂದು ಉಪಾಯವಿದೆ. ನಿನಗೆ ಒಬ್ಬನೇ ಒಬ್ಬ ಮಗನಿದ್ದಾನಲ್ಲವೇ? ನೀನು ಮನೆಗೆ ಹೋಗಿ ನಿನ್ನ ಪುಟ್ಟ ಮಗನನ್ನು ಕರೆದು ಅವನ ತಲೆಯ ಮೇಲೆ ಕೈಯಿಟ್ಟು ಬಂಗಾರ ಬೇಕೆಂದು ಕೇಳಿಕೋ. ನಿನ್ನ ಪುಟ್ಟ ಮಗನಿಗೆ ಒಂದೇ ಸಮನೆ ಸೀನುಗಳು ಬರುತ್ತವೆ. ಅವನು ಐವತ್ತು ಸಾರಿ 'ಅಕ್ಷೀ' ಎಂದು ಸೀನುವ ಹೊತ್ತಿಗೆ ಅವನು ಪೂರ್ತಿ ಬಂಗಾರವಾಗುತ್ತಾನೆ. ನೀನು ಆ ಬಂಗಾರವನ್ನು ಉಪಯೋಗಿಸಿ ಶ್ರೀಮಂತನಾಗು. ಆದರೆ ನೀನು ನಿನ್ನ ಮಗನನ್ನು ಕಳೆದುಕೊಳ್ಳುವೆ' ಎಂದು ನುಡಿದ, ಬಂಗಾರದ ಗುಂಗಿನಲ್ಲಿದ್ದ ತಮ್ಮನು ಹಾಗೇ ಮಾಡಲು ಒಪ್ಪಿ ಮನೆಗೆ ಬಂದ.

ಅವನು ಮನೆಗೆ ಬಂದಾಗ ಅವನ ಪುಟ್ಟ ಮಗನು ತನ್ನ ಓರಿಗೆಯ ಮಕ್ಕಳೊಡನೆ ಅಂಗಳದಲ್ಲಿ ಆಡುತ್ತಿದ್ದ. ತಮ್ಮನು ತನ್ನ ಮಗನನ್ನು ಹತ್ತಿರ ಕರೆದು ಬೇರೆ ಮಕ್ಕಳನ್ನು ದೂರ ಕಳಿಸಿದ. ಪ್ರೀತಿಯಿಂದ ಓಡಿಬಂದ ಮಗನ ತಲೆಯ ಮೇಲೆ ಕೈಯಿಟ್ಟು ಬಂಗಾರ ಬೇಕೆಂದು ಬೇಡಿದ. ಮುನಿಯು ಹೇಳಿದಂತೆ ಮಗನಿಗೆ ಒಂದೇ ಸಮನೆ 'ಅಕ್ಷೀ' ಎಂದು ಮೂಗಿನಿಂದ ಸೀನು ಬರಲು ಆರಂಭಿಸಿತು. ಹತ್ತು ಹದಿನೈದು ಸೀನುಗಳು ಬರುವ ಹೊತ್ತಿಗೆ ಮಗನ ಮೈಬಣ್ಣವು ಬಂಗಾರದ ಬಣ್ಣಕ್ಕೆ ತಿರುಗುತ್ತಿರುವುದನ್ನು ತಮ್ಮನು ಗಮನಿಸಿದ.

ಅದೇ ವೇಳೆಗೆ ತಮ್ಮನ ಹೆಂಡತಿಯು 'ಇದೇನ್ರೀ ಇದು? ಮಗು ಒಂದೇ ಸಮನೆ ಸೀನುತ್ತಿದೆ. ನೀವು ಅವನನ್ನು 'ಚಿರಂಜೀವಿಯಾಗು' ಎಂದು ಹರಸದೆ ಸುಮ್ಮನೆ ಕುಳಿತಿದ್ದೀರಲ್ಲಾ?' ಎನ್ನುತ್ತಾ ಮನೆಯ ಒಳಗಿನಿಂದ ಹೊರಗಡೆಗೆ ಬಂದಳು. ಅವಳ ಮಾತುಗಳನ್ನು ಕೇಳಿ ತಮ್ಮನ ಎದೆಗೆ ಕಲ್ಲು ಬಿದ್ದಂತಾಗಿ, ಅವನ ಬಂಗಾರದ ಗುಂಗು ಹರಿದು ಹೋಯಿತು. ತಾನೇನು ಮಾಡುತ್ತಿದ್ದೇನೆ ಎಂಬ ಪ್ರಜ್ಞೆ ಬಂತು. ಅವನು ತಕ್ಷಣವೇ ತನ್ನ ಕೈಯನ್ನು ಮಗನ ತಲೆಯ ಮೇಲಿಂದ ತೆಗೆದ. ಅವನಿಗೆ ಸೀನು ಬರುವುದು ನಿಂತಿತು. ಬಂಗಾರಕ್ಕೆ ತಿರುಗಿದ್ದ ಅವನ ಮೈಬಣ್ಣವು ಮೊದಲಿನಂತೆ ಆಯಿತು. ಅವನು ತನ್ನ ಮಗನನ್ನು ಗಟ್ಟಿಯಾಗಿ ಅಪ್ಪಿಕೊಂಡು ಮುದ್ದಾಡಿದ.

ತನ್ನ ಆಟಪಾಠಗಳಿಂದ ರಂಜಿಸುವ ಪುಟ್ಟ ಮಗನೇ ನಿಜವಾದ ಬಂಗಾರ, ತನ್ನ ಜೀವನಕ್ಕೆ ಆಧಾರವಾದ ಕೆಲಸವೂ ಬಂಗಾರವೇ! ಅದನ್ನು ಮರೆತು ಬೇರೆ ಬಂಗಾರಕ್ಕೆ ಆಸೆಪಟ್ಟ ತನ್ನ ಬಗ್ಗೆ ಅವನಿಗೇ ನಾಚಿಕೆಯಾಯಿತು. ಅವನು ತನ್ನ ವರ್ತನೆಯನ್ನು ಬದಲಾಯಿಸಿಕೊಂಡ. ಅವನು ಮತ್ತಷ್ಟು ಕಷ್ಟಪಟ್ಟು ದುಡಿದು ಮಗನನ್ನು ಬೆಳೆಸಿ ಒಳ್ಳೆ ವಿದ್ಯಾಭ್ಯಾಸ ಕೊಡಿಸಿದ. ತನ್ನ ಅಣ್ಣನ ಮನೆಯವರ ಜೊತೆ ಹಿಂದಿನಂತೆ ಪ್ರೀತಿ ತೋರಿದ, ಹೊಂದಿಕೊಂಡು ಬಾಳಿದ. ಅವನ ಮಗನಿಗೆ ಮುಂದೆ ಒಳ್ಳೆಯ ಉದ್ಯೋಗ ಸಿಕ್ಕಿತು, ಮಗನು ದೊಡ್ಡ ಮನೆಯನ್ನು ಕಟ್ಟಿದ. ಆ ಮನೆಯಲ್ಲಿ ತಮ್ಮನು ಎಲ್ಲರೊಂದಿಗೆ ಸುಖವಾಗಿ ಬಾಳಿದ. ಅವನಿಗೆ ನಿಜವಾದ ಬಂಗಾರ ಯಾವುದೆಂದು ಅರ್ಥವಾಗಿತ್ತು. ಹೀಗಾಗಿ ಅವನ ನೆಮ್ಮದಿಗೆ ಈಡು ಜೋಡಿರಲಿಲ್ಲ!

**-ಶಿವಮೊಗ್ಗ ಗೀತಾಶಾಸ್ತ್ರಿ**

# ಅಜ್ಜನ ಮನೆಯಲ್ಲಿ...

ಶಾಲೆಯ ಕೆಲಸಕೆ ವಿರಾಮ ಸಿಕ್ಕಿತು
ಪರೀಕ್ಷೆ ಮುಗಿಯುವ ವೇಳೆಗೆ
ಹಳ್ಳಿಗೆ ತೆರಳುವ ಕನಸದೊ ಹುಟ್ಟಿತು
ರಜೆಯು ಬರಲು ಶಾಲೆಗೆ

ತೋಟದ ನಡುವಲಿ ತೋಡಿನ ಬದಿಯಲಿ
ಅಜ್ಜನ ಹಳ್ಳಿಯ ಮನೆಯಿದೆ
ಗದ್ದೆಯ ಸೆರಗು ಗಿಡ– ಮರ ಮೆರಗು
ಪ್ರಕೃತಿಯ ಸೊಬಗು ಇಲ್ಲಿದೆ

ಗುಡ್ಡವನಿಳಿದು, ಮರವನು ಹತ್ತಿ
ಕೆರೆ ನೀರಲ್ಲಿ ಈಜಾಡಿ
ಪೇರಳೆ, ಮಾವು, ಹುಣಸೆ, ಬೇಲದ
ಹಣ್ಣುಗಳ ಸವಿ ರುಚಿ ನೋಡಿ

ಕಣ್ಣಾ ಮುಚ್ಚೇ, ಲಗೋರಿ, ಹುಲಿ–ದನ
ಆಡುವ ಆಟವೋ ನೂರೊಂದು.
ಶೀತಕೆ ಭೇದಿಗೆ ಅಜ್ಜಿ ಕಷಾಯವೆ
ಔಷಧವದೋ ಅಮೃತದ ಬಿಂದು

ತೆಂಗಿನ ಗರಿಯೊಳು ಅಡಗಿದ ಕೋಗಿಲೆ
ಹಾಡುವ ಹಾಡು ಬಲು ಇಂಪು
ಬೇಲಿಯ ಬದಿಯಲಿ ಅರಳಿದ ಕೇದಗೆ
ಸೂಸುವುದಿಲ್ಲಿ ಹಿತ ಕಂಪು

ಮೋದವ ನೀಡುವ ಅಜ್ಜನ ಕತೆಗಳು
ಕೇಳುತ ಕಿವಿಗಳು ನಿಮಿರುವವು.
ಸ್ವಾತಂತ್ರ್ಯ ಯೋಧರ ವೀರ ಪುರುಷರ
ಸಾಹಸಗಾಥೆಯ ಸಾರುವವು.

ಅಜ್ಜನ ಮನೆಯಲಿ ಕಲಿಯುವ ಪಾಠ
ಪುಸ್ತಕದೊಳಗೆಲ್ಲೂ ಇಲ್ಲ.
ರಜೆಯಲಿ ಅಲ್ಲಿಗೆ ಹೋಗುವುದೆಂದರೆ
ಸವಿದಂತೆಯೆ ಸರಿ ಸಿಹಿ ಬೆಲ್ಲ.

**-ಭಾಸ್ಕರ ಕೆ., ಕುಂಟಪದವು**

